ಗಂಗಾವತಿ ತಾಲ್ಲೂಕಿನ ಸಿಂಗನಾಳು ಪಿಕ್‌ಅಪ್ ಬಗ್ಗೆ

೨೩೮೨. ಶ್ರೀ ಶ್ರೀರಂಗದೇವರಾಯಲು, (ಕನಕಗಿರಿ).—ಮಾನ್ಯ ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಸಿಂಗನಾಳು ಪಿಕ್‌ಅಪ್ ಕೆಲಸ ಹಾಗೂ ಎಳೆಯನೂರು ಕಂಟೋಜಿ, ಹೆಬ್ಬಾಳು ಲಿಫ್ಟ್ ಇರಿಗೇಷನ್ ಕೆಲಸ ಯಾವ ಹಂತದಲ್ಲಿದೆ ?

ಆ) ಈ ಕೆಲಸಗಳು ಪೂರ್ತಿಯಾಗಿ ರೈತರಿಗೆ ನೀರು ಸರಬರಾಜು ಮಾಡಬೇಕಾದರೆ ಇನ್ನೂ ಎಷ್ಟು ವರ್ಷಗಳು ಬೇಕಾಗುವುದು ?

ಶ್ರೀ ಎಸ್.ಆರ್. ಬೊಮ್ಮಾಯಿ, (ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ೧) ಸಿಂಗನಾಳ್ ಪಿಕ್‌ಅಪ್.—

ಪಿಕ್‌ಅಪ್ ಗೋಡೆಯ ಕೆಲಸ ಪೂರ್ಣಗೊಂಡಿದ್ದು, ಭೂಸ್ವಾಧೀನ ಸಮಸ್ಯೆಯಿಂದ ಲಿಂಕರ್ ನಾಲೆ ಕೆಲಸ ಸ್ಥಗಿತಗೊಂಡಿದೆ.

೨) ಉಳೇನೂರು ಏತ ನೀರಾವರಿ ಯೋಜನೆ ಮತ್ತು ಕಂಟೋಜಿ ಏತ ನೀರಾವರಿ ಯೋಜನೆ.—

ಜಾಕ್‌ವೆಲ್ ಮತ್ತು ಇನ್‌ಟೇಕ್ ನಾಲೆಯ ಮಣ್ಣಿನ ಆಗೆತದ ಕೆಲಸ ಪ್ರಗತಿಯಲ್ಲಿದೆ.

೩) ಹೆಬ್ಬಾಳು ಏತ ನೀರಾವರಿ ಯೋಜನೆ.—

ಜಾಕ್‌ವೆಲ್, ಇನ್‌ಟೇಕ್ ಚೇಂಬರ್ ಹಾಗೂ ರೈಸಿಂಗ್ ಮೇನ್ ಕೆಲಸಗಳು ಪೂರ್ಣಗೊಂಡಿದ್ದು, ಪ್ಯೂನಿಫೋಲ್ಡ್ ಬದಲಿಸುವ ಹಾಗೂ ರೈಸಿಂಗ್ ಮೇನ್ ಜಂಟಿಗಳ ಸರಿಪಡಿಸುವ ಕೆಲಸಗಳಾಗಬೇಕಾಗಿದೆ.

ಆ) ೧) ಸಿಂಗನಾಳ್ ಪಿಕ್‌ಅಪ್.—

ಭೂಸ್ವಾಧೀನವಾದ ನಂತರ ಒಂದು ವರ್ಷದೊಳಗಾಗಿ ನೀರು ಸರಬರಾಜು ಮಾಡುವ ಸಾಧ್ಯತೆ ಇದೆ.

೨) ಉಳೇನೂರು ಮತ್ತು ಕಂಟೋಜಿ ಏತ ನೀರಾವರಿ ಯೋಜನೆಗಳು.—

ಮೂರು ವರ್ಷಗಳ ಅವಧಿಯಲ್ಲಿ ಸರಬರಾಜು ಮಾಡುವ ಸಾಧ್ಯತೆಯಿದೆ.

೩) ಹೆಬ್ಬಾಳು ಏತ ನೀರಾವರಿ ಯೋಜನೆ.—

ಇನ್ನೊಂದು ವರ್ಷದೊಳಗಾಗಿ ನೀರನ್ನು ಸರಬರಾಜು ಮಾಡುವ ಸಾಧ್ಯತೆ ಇದೆ.

ಶ್ರೀ ಶ್ರೀರಂಗದೇವರಾಯಲು.—ಅಧ್ಯಕ್ಷರೆ, ಸಿಂಗನಾಳು ಪಿಕ್‌ಅಪ್ ಗೋಡೆಯ ಕೆಲಸ ೧೯೮೩ರಲ್ಲಿ ಕಂಪ್ಲೀಟ್ ಆಗಿದ್ದರೂ ಭೂ ಸ್ವಾಧೀನದ ಕಾರ್ಯ ಇನ್ನೂ ಆಗಿಲ್ಲ. ಇದೇ ರೀತಿಯಾದರೆ ಮುಂದಿನ ವರ್ಷ ಗೋಡೆಯು ಬಿದ್ದು ಹೋಗುತ್ತದೆ. ಆದ್ದರಿಂದ ಆದಷ್ಟು ಬೇಗ ಭೂ ಸ್ವಾಧೀನ ಮಾಡಿಕೊಂಡು ಪಿಕ್‌ಅಪ್ ಕೆಲಸವನ್ನು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ೬(೧) ನೋಟಿಫಿಕೇಷನ್ ಆಗಿದೆ ಆದಷ್ಟು ಬೇಗ ಭೂ ಸ್ವಾಧೀನ ಮಾಡಿಕೊಂಡು ಕೆಲಸವನ್ನು ಮುಗಿಸುತ್ತೇನೆ.

ಶ್ರೀ ಶ್ರೀರಂಗದೇವರಾಯಲು.—ನಾಲ್ಕು ವರ್ಷ ಆಗಿದ್ದರೂ ಸಹ ಇನ್ನೂ ಭೂ ಸ್ವಾಧೀನ ಮಾಡಿಕೊಂಡಿಲ್ಲ. ಆದ್ದರಿಂದ ಆದಷ್ಟು ಬೇಗ ಭೂ ಸ್ವಾಧೀನ ಮಾಡಿಕೊಳ್ಳದೆ ಹೋದರೆ ಈಗ ಮಾಡಿರತಕ್ಕ ಕೆಲಸ ವೇಸ್ಟ್ ಆಗುತ್ತದೆ. ಲ್ಯಾಂಡ್ಸ್ ವಿಚಾರದಲ್ಲಿ ಯಾರೂಸಹ ಕೋರ್ಟಿಗೆ ಹೋಗಿಲ್ಲ. ಇದೆಲ್ಲಾ ಎ.ಸಿ. ಆಫೀಸಿನಲ್ಲಿ ಡಿಲ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಹಸೀಲ್ದಾರ್‌ರವರಿಂದ ಲೇಟ್ ಆಗಿದೆ. ಲ್ಯಾಂಡ್ ಲಾರ್ಡ್ಸ್ ಯಾರೂ ಕೋರ್ಟಿಗೆ ಹೋಗಿಲ್ಲ. ಕಳೆದ ವರ್ಷ ಈ ಪ್ರಶ್ನೆಯನ್ನು ಕೇಳಿದಾಗಲೂ ತಾವು ಇದೇ ಉತ್ತರ ಕೊಟ್ಟಿದ್ದೀರಿ, ಈ ಸಾರಿ ಪ್ರಶ್ನೆ ಕೇಳಿದಾಗಲೂ ಇದೇ ಉತ್ತರವನ್ನು ಕೊಟ್ಟಿದ್ದೀರಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ. ೬(೧) ನೋಟೀಫಿಕೇಷನ್ ಕಳೆದ ವರ್ಷ ಆಗಿರಲಿಲ್ಲ. ಆದರೆ ಈ ವರ್ಷ ೬(೧) ನೋಟೀಫಿಕೇಷನ್ ಆಗಿದೆ. ಆ ಭೂ ಒಡೆಯರು ಒಪ್ಪಿದರೆ, ಅಥವಾ ನೀವು ಅವರನ್ನು ಒಪ್ಪಿಸಿದರೆ ಇನ್ನು ೧ ತಿಂಗಳಲ್ಲಿ ನಾವು ಆರ್ಡರ್ ಪಾಸ್ ಮಾಡುತ್ತೇವೆ. ತಾವು ಅವರನ್ನು ಸಮಾಧಾನ ಮಾಡಿ ಹೇಳಿದರೆ, ನಾವು ನಮ್ಮ ಅಧಿಕಾರಿಗಳಿಗೆ ಹೇಳಿ ಮಾಡಿಸುತ್ತೇವೆ.

ಶ್ರೀ ಶ್ರೀರಂಗದೇವರಾಯಲು.—ಆಗ ಎಸ್ಟಿಮೇಟ್ ಕಾಸ್ಟ್ ೨೦ ಲಕ್ಷಕ್ಕೆ ಆಗಿತ್ತು. ಆದರೆ ಇವತ್ತು ಮೆಟೀರಿಯಲ್ಸ್ ಕಾಸ್ಟ್ ಜಾಸ್ತಿಯಾಗಿ ಅದು ಈಗ ಸುಮಾರು ೧ ಕೋಟಿ ರೂಪಾಯಿಗಳವರೆಗೆ ಆಗುತ್ತದೆ. ಈಗ ಇದು ಆ ಬಡ ರೈತರ ಮೇಲೆ ಹೊರೆಯಾಗುತ್ತದೆ.

ಅಧ್ಯಕ್ಷರು.—ಇದನ್ನು ಆದಷ್ಟು ಜಾಗ್ರತೆ ಮಾಡಿಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಸಹಕಾರ ಸಂಘಗಳ ಮುಖಾಂತರ ಆಗತಕ್ಕ ಕೆಲಸ. ಅವರು ಹಣವನ್ನು ಕೊಡಬೇಕು. ಹಣವನ್ನು ಕೊಟ್ಟರೆ ಬೇಗ ಮಾಡಿಸಬಹುದು.

ಶ್ರೀ ಶ್ರೀರಂಗದೇವರಾಯಲು.—ಅಧಿಕಾರಿಗಳು ಮಾಡುತ್ತಾರೆ. ಇದಕ್ಕೆ ಹಣದ ಕೊರತೆ ಏನೂ ಇಲ್ಲ. ಸಾಕಷ್ಟು ಹಣ ಇದೆ. ೧೯೮೫ರಲ್ಲಿ ೫೦ ಲಕ್ಷ ರೂಪಾಯಿಗಳು ಮಂಜೂರಾಗಿತ್ತು. ಅದು ಹಾಗೆಯೇ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಒರಿಜನಲ್ ಎಸ್ಟಿಮೇಟ್ ೨೭ ಲಕ್ಷ ರೂಪಾಯಿಗಳಂ Revised cost of Rs. 45 lakhs Expenditure incurred Rs. 32 lakhs. ಇನ್ನೂ ೧೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇದಕ್ಕೆ ಸಹಕಾರ ಸಂಘದವರಂ ಹಣವನ್ನು ಡಿಪಾಜಿಟ್ ಮಾಡಿದರೆ ಕೂಡಲೇ ಕೆಲಸವನ್ನು ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು.—ಮಾನ್ಯ ರಾಮಪ್ಪನವರೇ ನಿಮ್ಮ ೧೯೨೩ ಪ್ರಶ್ನೆಗೆ ೧೩–೬–೧೯೮೮ಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆ ಎಂದರೆ ದೊಡ್ಡ ಓದನ್ನು (ಕಾಲೇಜು ವಿದ್ಯಾಭ್ಯಾಸ) ಚಿಕ್ಕ ಹುಡುಗನ ಕೈಗೆ ಇವರು ಕೊಟ್ಟಿದ್ದಾರೆ.....

ಅಧ್ಯಕ್ಷರು.—ನಿಮಗೆ ೧೩–೬–೮೮ಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಇವರು ಏತಕ್ಕಾದರೂ ಮಂತ್ರಿಗಳಾಗಿದ್ದಾರೋ.....

ಅಧ್ಯಕ್ಷರು.—ಅವರು ಏತಕ್ಕೆ ಮಂತ್ರಿಗಳಾಗಿದ್ದಾರೆ ? ಇವರು ಏತಕ್ಕೆ ಸದಸ್ಯರಾಗಿದ್ದಾರೆ? ನಾವು ಏತಕ್ಕೆ ಇಲ್ಲಿದ್ದೇವೆ ಎಂದು ವಾತನಾಡುವುದು ಸರಿಯಲ್ಲ...

ಶ್ರೀ ಕೆ. ಮಲ್ಲಪ್ಪ.—ಜನರು ಅವಕಾಶವನ್ನು ಕೊಟ್ಟಿದ್ದಾರೆ. ಆದ್ದರಿಂದ ಇವರು ಮಂತ್ರಿಗಳಾಗಿದ್ದಾರೆ. ನೀವು ಯಾವರೀತಿ ಶಾಸಕರಾಗಿದ್ದೀರಿ ಅದೇರೀತಿ...

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ನಿಮಗೆ ೧೩ನೇ ತಾರೀಖಿನ ಉತ್ತರ ಕೊಡಿಸುತ್ತೇನೆ. ಶ್ರೀಮತಿ ಸರೋಜಿನಿ ಮಹಿಷಿಯವರ ಪ್ರಶ್ನೆಗೂ ೧೩ನೇ ತಾರೀಖಿನ ಉತ್ತರವನ್ನು ಕೊಡಿಸುತ್ತೇನೆ.

ಚು. ಪ್ರ, ೨೧೭೭

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.